Re-uploaded at Learnmate

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ-1
## S.S.L.C. MODEL QUESTION PAPER-1 : 2024-25

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : First Language — KANNADA

**ವಿಷಯ ಸಂಕೇತ : 01-K** | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 100 ] | [ Max. Marks : 100

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

Re-uploaded at Learnmate



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. ಕನ್ನಡ ವರ್ಣಮಾಲೆಯ ವರ್ಗದ ಪಂಚಮಾಕ್ಷರಗಳು

   (ಎ) ಅಲ್ಪಪ್ರಾಣಾಕ್ಷರ

   (ಬಿ) ಮಹಾಪ್ರಾಣಾಕ್ಷರ

   (ಸಿ) ಅನುನಾಸಿಕ

   (ಡಿ) ಯೋಗವಾಹಗಳು

2. ಪಂಚಮೀ ವಿಭಕ್ತಿಯ ಕಾರಕಾರ್ಥವಿದು

   (ಎ) ಸಂಪ್ರದಾನ

   (ಬಿ) ಅಪಾದಾನ

   (ಸಿ) ಅಧಿಕರಣ

   (ಡಿ) ಕರಣಾರ್ಥ

3. ದೇವರು ನಿಮಗೆಲ್ಲರಿಗೂ ಶುಭವನ್ನುಂಟು ಮಾಡಲಿ – ಗೆರೆ ಎಳೆದ ಪದದ ಕ್ರಿಯಾರೂಪ

   (ಎ) ವಿಧ್ಯರ್ಥಕ

   (ಬಿ) ಸಂಭಾವನಾರ್ಥಕ

   (ಸಿ) ನಿಷೇಧಾರ್ಥಕ

   (ಡಿ) ಆತ್ಮಾರ್ಥಕ

4. ಬಹುವ್ರೀಹಿ ಸಮಾಸದ ಪದವಿದು

   (ಎ) ಮುಕ್ಕಣ್ಣು

   (ಬಿ) ಕಡೆಗಣ್ಣು

   (ಸಿ) ಕಂಗೆಡು

   (ಡಿ) ಚಕ್ರಪಾಣಿ

Re-uploaded at Learnmate



5. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

   (ಎ) ಸಾಮಾನ್ಯ ವಾಕ್ಯ

   (ಬಿ) ಸಂಯೋಜಿತ ವಾಕ್ಯ

   (ಸಿ) ಮಿಶ್ರವಾಕ್ಯ

   (ಡಿ) ಪ್ರಶ್ನಾರ್ಥಕ ವಾಕ್ಯ

6. 'ತರುವಾಯ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ

   (ಎ) ಅವಧಾರಣಾರ್ಥಕಾವ್ಯಯ

   (ಬಿ) ಅನುಕರಣಾವ್ಯಯ

   (ಸಿ) ಸಾಮಾನ್ಯಾರ್ಥಕಾವ್ಯಯ

   (ಡಿ) ಕ್ರಿಯಾರ್ಥಕಾವ್ಯಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ವೈಶಾಖ : ಬೇಸಗೆ :: ಪ್ರತೀಹಾರಿ : ......................... .

8. ಚೆಲುವಿಕೆ : ತದ್ಧಿತಾಂತ ಭಾವನಾಮ :: ತಿನ್ನುವಿಕೆ : ......................... .

9. ಮಕ್ಕಳುಮರಿ : ಜೋಡುನುಡಿ :: ಬಟ್ಟಬಯಲು : ......................... .

10. ಮನುಷ್ಯ : ರೂಢನಾಮ :: ಪೂಜಾರಿ : ................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 × 1 = 7**

11. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

12. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

Re-uploaded at Learnmate



13. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?

14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?

15. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?

16. ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು ?

17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಬ್ರಿಟಿಷ್ ಅಧಿಕಾರಿಯ ಹೆಸರೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳಾವುವು ?

19. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು ನಿರಾಶೆಯಿಂದ ಹೇಳಿದ ಮಾತುಗಳಾವುವು ?

20. ಲಕ್ಷ್ಮಣನು ಅಣ್ಣನಾದ ರಾಮನನ್ನು ಸಂತೈಸಿದ ಬಗೆ ಹೇಗೆ ?

21. ಶಬರಿಯು ರಾಮನ ಸ್ವಾಗತಕ್ಕಾಗಿ ಮಾಡಿಕೊಂಡಿದ್ದ ಸಿದ್ಧತೆಗಳನ್ನು ತಿಳಿಸಿ.

22. ಕರ್ಣನು ಯುದ್ಧದ ವಿಚಾರದಲ್ಲಿ ಕೈಗೊಂಡ ತೀರ್ಮಾನವನ್ನು ಬರೆಯಿರಿ.

23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು ?

24. ಪುಟ್ಟ ಪೋರಿ ಏಕೆ ಮೂಕವಿಸ್ಮಿತಳಾಗಿದ್ದಾಳೆ ?

25. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?

27. ಶುಕನಾಸನು ತಿಳಿಸಿರುವಂತೆ ರಾಜರ ಪ್ರಕೃತಿಯನ್ನು ಕುರಿತು ಬರೆಯಿರಿ.

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ದೇವನೂರ ಮಹಾದೇವ

29. ಲಕ್ಷ್ಮೀಶ

Re-uploaded at Learnmate



**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

30. ಭಾನುವೆ ಸಾಲದೆ ಪಗಲೆನಿ

ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ನನ್ನ ಧೈರ್ಯದ ಭೂಮಿ ಕಾಲಡಿಯೆ ಕುಸಿಯುತಿದೆ"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3**

32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.

**ಅಥವಾ**

ಆಳಾಗಬಲ್ಲವನು; ಅರಸಾಗಬಲ್ಲನು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು."

34. "ಮನುಷ್ಯನಂತೆ ಟೊಪ್ಪಿಗೆಯಲ್ಲವೆ ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ."

35. "ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ."

36. "ಹೊಸ ಎಚ್ಚರದೊಳು ಬದುಕೋಣ."

37. "ಕೌಂತೇಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ."

38. "ಬೇರೆ ಬಣ್ಣವನೆ ಕಾಣೆ."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಕೊಡಲಿ ...........................................................

.....................................................................

.....................................................................

........................................................ ನಾನೆಷ್ಟಾ

**ಅಥವಾ**

Re-uploaded at Learnmate



ಸಿಕ್ಕದ್ದು ........................................................

...................................................................

...................................................................

.......................................................... ಜನಕಾ

**XI. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :**

**1 × 4 = 4**

40. ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ಭಾಷೆ ಸತ್ವಪೂರ್ಣವಾಗಿ ಹೇಗೆ ವಿಕಾಸಗೊಳ್ಳುತ್ತದೆ ? ವಿವರಿಸಿ.

**ಅಥವಾ**

ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

Re-uploaded at Learnmate



**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

43. ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮ ವಿಷಯಗಳನ್ನು ಕೆಲವು ಕಷ್ಟವಾದವು, ಕೆಲವು ಸುಲಭವಾದವು ಎಂದು ಭಾವಿಸುತ್ತಾರೆ. ಅದು ಒಳ್ಳೆಯದಲ್ಲ. ಅದಕ್ಕೆ ಕಾರಣ ಏನೇ ಇರಬಹುದು. ನಿಮ್ಮ ಶಿಕ್ಷಕರು ಆ ವಿಷಯ ಕಷ್ಟವೆಂದು ಹೇಳಿರಬಹುದು. ಇಲ್ಲವೆ ನಿಮ್ಮ ಗೆಳೆಯರು "ಆ ವಿಷಯ ಮಹಾಕಷ್ಟ, ಕಬ್ಬಿಣದ ಕಡಲೆಯಂತೆ ಕಠಿಣ" ಎಂದು ನಾಲ್ಕಾರು ಬಾರಿ ಹೇಳಿರಬಹುದು ಅಥವಾ ಆ ವಿಷಯದಲ್ಲಿ ಬಹಳ ಕಡಿಮೆ ಅಂಕ ಬಂದಿರಲೂಬಹುದು. ಈ ಮೂರು ಅಲ್ಲದೆ ಬೇರೆ ಕಾರಣಗಳು ಇರಬಹುದು. ಹೇಗೋ ಆ ವಿಷಯ ಕಷ್ಟವಾದದ್ದು ಎಂಬ ಭಾವನೆಯಿಂದ ಹೊರಬನ್ನಿ. ಏಕೆಂದರೆ ನಿಜವಾಗಿಯೂ ಅದು ಕಷ್ಟವಾಗಿದ್ದರೆ ಉಳಿದ ವಿದ್ಯಾರ್ಥಿಗಳಿಗೂ ಕೂಡಾ ಆ ಸಮಸ್ಯೆ ಇರುತ್ತಿತ್ತು. ಆದರೆ ಅವರು ಹಾಗೆ ಹೇಳುವುದಿಲ್ಲ. ಅಷ್ಟೇ ಏಕೆ ಅದರಲ್ಲೆ ಹೆಚ್ಚು ಅಂಕಗಳನ್ನು ಗಳಿಸುತ್ತಾರೆ. ಆದುದರಿಂದ ನೀವು ಅಂತಹ ಆಲೋಚನೆಯಿಂದ ಹೊರಬರಲು ಪ್ರಯತ್ನಿಸಬೇಕು. ಆ ವಿಷಯದ ಬಗೆಗಿರುವ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು ಇದು ಬಳ ಆಸಕ್ತಿಯುತವಾದ ವಿಷಯ. ಸ್ವಲ್ಪ ಶ್ರಮವಹಿಸಿದರೆ ಆ ವಿಷಯ ಅರ್ಥಮಾಡಿಕೊಳ್ಳಬಹುದು. ಉಳಿದ ವಿಷಯಗಳಿಗಿಂತ ಸ್ವಲ್ಪ ಹೆಚ್ಚು ಸಮಯವನ್ನು ನಿಗದಿಗೊಳಿಸಿ ಓದಿದರೆ ಅರ್ಥವಾಗುತ್ತದೆ. ಮತ್ತೆ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡು ಪುನರಾವರ್ತನೆ ಮಾಡಿದರೆ ಅದರಲ್ಲೂ ಉತ್ತಮ ಫಲಿತಾಂಶ ಸಾಧಿಸಬಲ್ಲೆ ಎಂದು ಪ್ರಯತ್ನಿಸಬೇಕು. ಆಗ ಆ ವಿಷಯವು ಕೂಡ ಕರತಲಾಮಲಕವಾಗುತ್ತದೆ. ಹಾಗೆ ಆಯಾ ವಿಷಯದ ಕುರಿತು ಆಲೋಚಿಸದೆ ಇದ್ದರೆ, ಪುನರಾವರ್ತನೆ ಮಾಡದೆ, ಪ್ರಯೋಗಶೀಲರಾಗದೆ ಹೋಗಿದ್ದರೆ ಥಾಮಸ್ ಅಲ್ವಾ ಎಡಿಸನ್, ಐನ್‌ಸ್ಟಿನ್‌ನಂತಹ ವಿಜ್ಞಾನಿಗಳು ಯಶಸ್ಸು ಸಾಧಿಸುತ್ತಿರಲಿಲ್ಲ.

***ಪ್ರಶ್ನೆಗಳು:***

ಅ) ವಿದ್ಯಾರ್ಥಿಗಳು ಕಷ್ಟದ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಲು ಹೇಗೆ ಪ್ರಯತ್ನಿಸಬೇಕು ?

ಬ) ಕೆಲವು ವಿಷಯಗಳು ಕಷ್ಟಕರ ಎಂಬ ಆಲೋಚನೆ ಬರಲು ಕಾರಣವೇನು ?

Re-uploaded at Learnmate



**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

44. ನಿಮ್ಮನ್ನು ದಾವಣಗೆರೆ ಜಿಲ್ಲೆಯ ಮಳಲಕೆರೆ ಗ್ರಾಮದ ನಿವಾಸಿ 'ಅನುಷಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಆರಂಭಿಸುವಂತೆ ಕೋರಿ ಮಾನ್ಯ 'ಶಿಕ್ಷಣ ಸಚಿವರಿಗೆ' ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯ 'ನವೀನ್' ಎಂದು ಭಾವಿಸಿಕೊಂಡು, 'ರಾಷ್ಟ್ರೀಯ ಪೋಷಣ್ ಅಭಿಯಾನ ಕಾರ್ಯಕ್ರಮ'ದ ಮಹತ್ವವನ್ನು ಕುರಿತು ಮೈಸೂರಿನಲ್ಲಿ ವಾಸವಾಗಿರುವ ಗೆಳತಿ 'ಸವಿತಾ'ಳಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

**1 × 5 = 5**

45. ರಾಷ್ಟ್ರೀಯ ಭಾವೈಕ್ಯ ಬೆಳೆಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.

**ಅಥವಾ**

ಸಾಮಾಜಿಕ ಜಾಲತಾಣಗಳ ಸದ್ಬಳಕೆ.

Re-uploaded at Learnmate

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ-2
## S.S.L.C. MODEL QUESTION PAPER-2 : 2024-25

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : First Language — KANNADA

**ವಿಷಯ ಸಂಕೇತ : 01-K** | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 100 ] | [ Max. Marks : 100

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

Re-uploaded at Learnmate



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. 'ಪಂಡಿತ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

   (ಎ) ಅನ್ವರ್ಥನಾಮ (ಬಿ) ರೂಢನಾಮ

   (ಸಿ) ಅಂಕಿತನಾಮ (ಡಿ) ಸರ್ವನಾಮ

2. ಸವರ್ಣದೀರ್ಘ ಸಂಧಿಗೆ ಉದಾಹರಣೆಯಿದು

   (ಎ) ವಾಗ್ದೇವಿ (ಬಿ) ಮಳೆಗಾಲ

   (ಸಿ) ಸುರಾಸುರ (ಡಿ) ಏಕೈಕ

3. '<u>ಅಂಬೇಡ್ಕರರಿಗೆ</u> ವೇಳೆ ಎಂದರೆ ಜ್ಞಾನಾರ್ಜನೆಯಾಗಿತ್ತು' – ಈ ವಾಕ್ಯದಲ್ಲಿ ಗೆರೆ ಎಳೆದ ಪದದಲ್ಲಿರುವ ವಿಭಕ್ತಿ

   (ಎ) ಪ್ರಥಮಾ (ಬಿ) ಸಪ್ತಮೀ

   (ಸಿ) ತೃತೀಯಾ (ಡಿ) ಚತುರ್ಥೀ

4. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆ

   (ಎ) ಪೂರ್ಣವಿರಾಮ (ಬಿ) ಅರ್ಧವಿರಾಮ

   (ಸಿ) ಪ್ರಶ್ನಾರ್ಥಕ (ಡಿ) ವಾಕ್ಯವೇಷ್ಟನ ಚಿಹ್ನೆ

5. 'ಮಾಡು' ಪದದ ಸಂಭಾವನಾರ್ಥಕ ರೂಪ

   (ಎ) ಮಾಡಲಿ (ಬಿ) ಮಾಡಳು

   (ಸಿ) ಮಾಡಿಯಾಳು (ಡಿ) ಮಾಡನು

6. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ

   (ಎ) ಮಿಶ್ರವಾಕ್ಯ (ಬಿ) ಸಂಯೋಜಿತ ವಾಕ್ಯ

   (ಸಿ) ಸಂಯುಕ್ತವಾಕ್ಯ (ಡಿ) ಸಾಮಾನ್ಯ ವಾಕ್ಯ

Re-uploaded at Learnmate



**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

7. ಕಣ್ದೆರೆ : ಕ್ರಿಯಾ ಸಮಾಸ :: ಸಪ್ತಸ್ವರಗಳು : ........................ .

8. ಸ್ಥಾನ : ಠಾಣ :: ಕಾರ್ಯ : ........................ .

9. ಪಟಪಟನೆ : ಅನುಕರಣಾವ್ಯಯ :: ಕೆನೆಮೊಸರು : ........................ .

10. ಬರೆಯುವ : ಕೃದಂತನಾಮ :: ಬಳೆಗಾರ : .................. .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7**

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?

12. ಹುಲಿಗೆ ಪರಮಾನಂದವಾಗಲು ಕಾರಣವೇನು ?

13. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?

14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಏಕೆ ಹೇಳುತ್ತಾನೆ ?

15. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ ?

16. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು ?

17. ಗುರುವಾಣಿ ಯಾರಿಗೆ ಹೊರೆಯೆನಿಸುತ್ತದೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರ ಮನಸ್ಸಿನಲ್ಲಿ ಬಂದ ಯೋಚನೆಗಳಾವುವು ?

19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?

20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ? ವಿವರಿಸಿ.

21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು ?

[ Turn over

Re-uploaded at Learnmate



22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿಯು ಹೇಗೆ ಹರಸಿದೆ ?

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

24. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

25. ಬಾಲಕ ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಲು ಕಾರಣವೇನು ?

26. ಜ್ಞಾನಿ–ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ವಿವರಿಸಿ.

27. ಪೈಗಳ ತಮ್ಮನ ನೂಲು ಮದುವೆಗೆ ಸಿದ್ಧತೆ ಹೇಗೆ ನಡೆಯುತ್ತಿತ್ತು ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ವಿ.ಕೃ. ಗೋಕಾಕ್

29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

30. ಕುರುಪತಿಗಿಲ್ಲದೈವಬಲಮಾಜಿಗೆ ಮೇಲ್ಮಲೆಗೆಯ್ವರಾಗಳುಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ವಸಂತಮಾಸದಲ್ಲಿ ಹೂಬಿಟ್ಟ ಮರಗಿಡಗಳು ಮದುವಣಗಿತ್ತಿಯಂತೆ ಕಂಗೊಳಿಸುತ್ತಿದ್ದವು."

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3**

32. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ.

**ಅಥವಾ**

ತಾಳಿದವನು ಬಾಳಿಯಾನು.

Re-uploaded at Learnmate



**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ."

34. "ನಿನಗೊಂದು ಗುಡಿ ಮನೆ ಕಟ್ತಾ ಇದ್ದೀವಿ."

35. "ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ."

36. "ವಸಂತವಾಗುತ ಮುಟ್ಟೋಣ."

37. "ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ."

38. "ಈಗಳೊಂದಡಕೆಯುಮಿಲ್ಲ ಕೈಯೊಳ್."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಹಸುರಾಗಸ; ......................................................

..................................................................

..................................................................

........................................................ ಬಿಸಿಲೂ!

**ಅಥವಾ**

ಹೊಸ ಹೂವಿನ ...................................................

..................................................................

..................................................................

................................................... ಯುಸಿರೂ!

Re-uploaded at Learnmate



**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4**

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮು ।

ನೊರ್ವನೇ ವೀರನಾತನ ಯಜ್ಞತುರಗಮಿದು ।

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।

ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ರಾಮನ ದರ್ಶನದಿಂದ ಶಬರಿಯ ಚಿಂತೆ ಹಿಂಗಿಹೋದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

"ತಾಳುವಿಕೆಗಿಂತ ಮಿಗಿಲಾದ ತಪವಿಲ್ಲ" ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ? ವಿವರಿಸಿ.

42. ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ಬರೆಯಿರಿ.

**ಅಥವಾ**

ಶ್ರೀಕೃಷ್ಣನ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾಗಿ ನೋವು ಸಂಕಟದಿಂದ ಬಳಲುವ ಕರ್ಣನ ಮನಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

43. ಇಂದು ಯುರೋಪ್, ಅಮೆರಿಕಾ, ಆಸ್ಟ್ರೇಲಿಯಾ, ಜಪಾನ್‌ಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಜನಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಜೂನ್ 5ರ ವಿಶ್ವ ಪರಿಸರ ದಿನಾಚರಣೆಯ ಜೊತೆಗೆ ಅವರು ಏಪ್ರಿಲ್ 22 ರಂದು ಭೂದಿನ ಆಚರಿಸುತ್ತಾರೆ. ಏಪ್ರಿಲ್ 26 ರಂದು 'ಚರ್ನೋಬಿಲ್ ದಿನ'. ಆಗಸ್ಟ್ 6 ರಂದು

Re-uploaded at Learnmate



'ಹಿರೋಶಿಮಾ ದಿನ', ಡಿಸೆಂಬರ್ 3 ರಂದು 'ಭೂಪಾಲ್ ದಿನ'... ಹೀಗೆ ಭೂಮಿಗೆ ಆಪತ್ತು ಬಂದ ದಿನಗಳನ್ನೆಲ್ಲಾ ನೆನೆಪಿಸುವ ಹಾಗೂ ಜನರನ್ನು ಜಾಗೃತರನ್ನಾಗಿ ಮಾಡುವ ಕಾರ್ಯಕ್ರಮಗಳಲ್ಲಿ ಎಂದಿಗಿಂತ ಹೆಚ್ಚಿನ ಸಂಖ್ಯೆಯ ಜನ ಭಾಗವಹಿಸುತ್ತಾರೆ. ಎಷ್ಟೋ ಬಾರಿ ಇಂಥ 'ದಿನಾಚರಣೆ'ಗಳಿಗಾಗಿ ಕಾಯದೇ, ಅವಕಾಶ ಬಂದಾಗಲೆಲ್ಲಾ ಒಂದುಗೂಡುತ್ತಾರೆ.

ಮತ್ತೆ ಅಲ್ಲಿನವರು ಹಾಕಿಕೊಳ್ಳುವ ಕಾರ್ಯಕ್ರಮಗಳು ತೀರ ವಿಶಿಷ್ಟವಾಗಿರುತ್ತದೆ. 'ಗ್ರೀನ್ ಪೀಸ್'ನಂತಹ ವೃಥ್ವಿ ರಕ್ಷಣಾ ಯೋಧರ ಕೆಚ್ಚೆದೆಯ ಸಾಹಸಗಳನ್ನಂತೂ ಬಿಡಿ; ದಟ್ಟ ಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ 'ಶುದ್ಧ ಗಾಳಿ ನಮ್ಮೆಲ್ಲರ ಹಕ್ಕು' ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ಕಾಡಿನ ರಸ್ತೆಯಲ್ಲಿ ಹೊಂಡ ತೋಡಿ, ತಮಗೆ ತಾವೇ ಆನೆ ಸರಪಳಿ ಬಿಗಿದು, ಬೀಗ ಹಾಕಿ ಕೂತು ಬಿಡುತ್ತಾರೆ. ಅಂದದ ತುಪ್ಪಳಕ್ಕೆಂದು ಮುದ್ದು ಸೀಲ್ ಪ್ರಾಣಿಗಳ ನೆತ್ತಿಯ ಮೇಲೆ ದೊಣ್ಣೆಯಿಂದ ಠಪ್ಪೆಂದು ಕುಟ್ಟಿ ಕೊಲ್ಲುವ ದುಷ್ಟರ ವಿರುದ್ಧ ಈ ಯೋಧರ ಉಪಾಯವೇನು ಗೊತ್ತೆ ? ಅವರಿಗಿಂತ ಮೊದಲೇ ಇವರು ಹಿಮಪ್ರಾಂತ್ಯಕ್ಕೆ ಹೋಗಿ, ಸೀಲ್ ಪ್ರಾಣಿಗಳ ಮೇಲೆ ಎನಾಮಲ್ ಬಣ್ಣ ಸುರಿದು ಅವುಗಳ ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಕೊಳವೆಯ ಮೂಲಕ ಕೊಳೆಯನ್ನು ಆಳ ಸಮುದ್ರಕ್ಕೆ ಹರಿಬಿಡುತ್ತಿದ್ದರೆ ಗ್ರೀನ್ ಪೀಸ್‌ನ ಮುಳುಗುವೀರರು ಆ ಕೊಳವೆಯ ಬಾಯಿಯನ್ನು ನೀರಿನೊಳಗೆ ಕಟ್ಟಿ ಬರುತ್ತಾರೆ. ಹೀಗೆ ಜೀವವನ್ನೇ ಪಣಕ್ಕಿಟ್ಟು ಗಾಂಧೀಜಿಯವರ ಮಾದರಿಯ ಅಹಿಂಸಾತ್ಮಕ ಸೆಣಸಾಟ ನಡೆಸುತ್ತಾರೆ.

***ಪ್ರಶ್ನೆಗಳು:***

ಅ) ಪರಿಸರ ಸಂರಕ್ಷಣೆಯಲ್ಲಿ ಗ್ರೀನ್ ಪೀಸ್ ಯೋಧರು ಹೇಗೆ ಸೆಣಸಾಟ ನಡೆಸುತ್ತಾರೆ ?

ಬ) ಯುರೋಪ್, ಅಮೆರಿಕಾಗಳಲ್ಲಿ ಆಚರಿಸುವ ದಿನಾಚರಣೆಗಳ ಕುರಿತು ಬರೆಯಿರಿ.

Re-uploaded at Learnmate



**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

44. ನಿಮ್ಮನ್ನು ಮೈಸೂರಿನ ರಾಮಕೃಷ್ಣ ನಗರದ ಸರ್ಕಾರಿ ಪ್ರೌಢಶಾಲೆಯ 'ಅನರ್ಘ್ಯ' ಎಂದು ಭಾವಿಸಿಕೊಂಡು, ಶಾಲೆಗೆ ಅಗತ್ಯವಾಗಿ ಬೇಕಾಗಿರುವ ಒಳಾಂಗಣ ಕ್ರೀಡಾ ಪರಿಕರಗಳನ್ನು ಒದಗಿಸಿಕೊಡುವಂತೆ ಕೋರಿ, 'ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ'ಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹಾವೇರಿಯ ಮೊರಾರ್ಜಿ ವಸತಿ ಶಾಲೆಯ 'ಮಾಲತಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಪ್ರಜಾಪ್ರಭುತ್ವ ದಿನಾಚರಣೆ'ಯನ್ನು ಕುರಿತು ಬಾಗಲಕೋಟೆಯಲ್ಲಿ ವಾಸವಾಗಿರುವ 'ಶಾರದಾ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5**

45. ಮೂಢನಂಬಿಕೆಗಳನ್ನು ತೊಡೆದು ಹಾಕುವಲ್ಲಿ ವಿದ್ಯಾರ್ಥಿಗಳ ಪಾತ್ರ.

**ಅಥವಾ**

ಶಾಲೆಗಳಲ್ಲಿ ಮೌಲ್ಯ ಶಿಕ್ಷಣದ ಮಹತ್ವ.

Re-uploaded at Learnmate

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -3
## S.S.L.C. MODEL QUESTION PAPER-3 : 2024-25

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : First Language — KANNADA

**ವಿಷಯ ಸಂಕೇತ : 01-K** **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] [ Time : 3 Hours 15 Minutes

ಗರಿಷ್ಠ ಅಂಕಗಳು : 100 ] [ Max. Marks : 100

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

Re-uploaded at Learnmate



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

   (ಎ) ೦೯ (ಬಿ) ೨೫

   (ಸಿ) ೦೬ (ಡಿ) ೦೫

2. ಅನ್ವರ್ಥ ನಾಮಪದಕ್ಕೆ ಉದಾಹರಣೆ

   (ಎ) ಪಟ್ಟಣ (ಬಿ) ಪರ್ವತ

   (ಸಿ) ಮಹಾದೇವ (ಡಿ) ವಿಜ್ಞಾನಿ

3. ಪಾರಿಭಾಷಿಕ ಪದಗಳನ್ನು, ಅನ್ಯಭಾಷೆಯ ಪದಗಳನ್ನು, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ

   (ಎ) ಉದ್ಧರಣ (ಬಿ) ವಾಕ್ಯವೇಷ್ಟನ

   (ಸಿ) ಆವರಣ (ಡಿ) ವಿವರಣ

4. 'ಧಗಧಗ' ಪದದಲ್ಲಿರುವ ಅವ್ಯಯ

   (ಎ) ಅನುಕರಣಾವ್ಯಯ (ಬಿ) ಭಾವಸೂಚಕಾವ್ಯಯ

   (ಸಿ) ಕ್ರಿಯಾರ್ಥಕಾವ್ಯಯ (ಡಿ) ಸಾಮಾನ್ಯಾರ್ಥಕಾವ್ಯಯ

5. 'ಧೃತಿಗೆಟ್ಟು' ಪದ ಈ ಸಂಧಿಗೆ ಸೇರಿದೆ

   (ಎ) ಜಶ್ತ್ವ (ಬಿ) ಆದೇಶ

   (ಸಿ) ಗುಣ (ಡಿ) ಆಗಮ

6. "ಭರತನು ಮನೆಗೆಲಸವನ್ನು ಮಾಡನು" – ಗೆರೆ ಎಳೆದ ಪದದಲ್ಲಿರುವ ಕ್ರಿಯಾ ರೂಪ

   (ಎ) ಸಂಭಾವನಾರ್ಥಕ (ಬಿ) ವಿಧ್ಯರ್ಥಕ

   (ಸಿ) ನಿಷೇಧಾರ್ಥಕ (ಡಿ) ಕ್ರಿಯಾರ್ಥಕ

Re-uploaded at Learnmate



**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

7. ಬಂಜೆ : ವಂಧ್ಯಾ :: ಕುಠಾರ : ....................... .

8. ಸತಿಪತಿ : ಜೋಡುನುಡಿ :: ಮೆಲ್ಲಮೆಲ್ಲನೆ : ....................... .

9. ಮ್ಯಾಗ : ಮೇಲೆ :: ಇಸವಾಸ : ....................... .

10. ಸಪ್ತಮೀ : ಒಳ್ :: ದ್ವಿತೀಯಾ : .................. .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7**

11. ಶಾನುಭೋಗರು ಇರಸಾಲಿಗಾಗಿ ಯಾವ ಹಳ್ಳಿಗೆ ಹೋಗಿದ್ದರು ?

12. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು ?

13. 'ಬ್ಲಾಕ್ ಔಟ್' ನಿಯಮ ಎಂದರೇನು ?

14. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸಲಹೆ ನೀಡಿದವರು ಯಾರು ?

15. ಹಕ್ಕಿಯು ಯಾರನ್ನು ಹರಸಿದೆ ?

16. ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?

17. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಕೋಗಿಲೆಗಳು ಹೇಗೆ ಹಾಡುತ್ತಿದ್ದವು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

19. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವನ್ನು ತಿಳಿಸಿ.

20. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ಸಂರಕ್ಷಿಸಿದಳು ?

Re-uploaded at Learnmate



21. ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?

22. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳನ್ನು ತಿಳಿಸಿ.

23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಬರೆದ ಅಂಶಗಳಾವುವು ?

24. ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಸ್ವಾತಂತ್ರ್ಯ ಇತಿಹಾಸದ ಕರಾಳ ಘಟನೆ. ಹೇಗೆ ?

25. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂದು ವಿವೇಕಾನಂದರು ಅಭಿಪ್ರಾಯ ಪಟ್ಟಿದ್ದಾರೆ ?

26. ಅಕ್ಕಮಹಾದೇವಿಯು ಭಗವಂತನಲ್ಲಿ ಶರಣಾಗುವ ಭಾವವನ್ನು ಹೇಗೆ ತಿಳಿಸಿದ್ದಾಳೆ ?

27. ಪೈಗಳು ಪ್ರಾಸ ತೊರೆದು ಬರೆಯಲು ನಿಶ್ಚಯಿಸಿದ ಸಂದರ್ಭವನ್ನು ತಿಳಿಸಿ.

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ಎಂ. ಮರಿಯಪ್ಪಭಟ್ಟ

29. ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

30. ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ಮಾತುಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ."

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3**

32. ತುಂಬಿದ ಕೊಡ ತುಳುಕುವುದಿಲ್ಲ.

**ಅಥವಾ**

ಮಾತೇ ಮುತ್ತು; ಮಾತೇ ಮೃತ್ಯು.

Re-uploaded at Learnmate



**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಕೈಗಾರಿಕೀಕರಣ ಇಲ್ಲವೆ ಅವನತಿ."

34. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"

35. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"

36. "ಮಂಗಳಲೋಕದ ಅಂಗಳಕೇರಿ."

37. "ನಿಮಗೆ ಪೊಡೆಮಟ್ಟು ಪೊಪೀ ಸಮಕಟ್ಟಿಂ ಬಂದೆನ್"

38. "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಕಲುಷಿತವಾದೀ ..................................................

.................................................................

.................................................................

..................................................... ಮುಟ್ಟೋಣ.

**ಅಥವಾ**

ಮತಗಳೆಲ್ಲವೂ ..................................................

.................................................................

.................................................................

..................................................... ಬಿತ್ತೋಣ.

Re-uploaded at Learnmate



**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4**

40. ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ದಾರಿತಪ್ಪಿದ ಅಗ್ನಿಭೂತಿ ವಾಯುಭೂತಿಯರನ್ನು ಸೂರ್ಯಮಿತ್ರನು ಹೇಗೆ ಸರಿದಾರಿಗೆ ತಂದನು ? ವಿವರಿಸಿ.

**ಅಥವಾ**

ಸೂರ್ಯಮಿತ್ರನು ತನ್ನ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

42. ಹಲಗಲಿ ಬೇಡರು ಕಂಪೆನಿ ಸರ್ಕಾರದ ವಿರುದ್ಧ ದಂಗೆ ಎದ್ದ ಬಗೆ ಹಾಗೂ ದಂಗೆ ಎದ್ದವರನ್ನು ಸರ್ಕಾರ ನಿಯಂತ್ರಿಸಿದ ಘಟನೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಹಲಗಲಿ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದ ಬಗೆ ಲಾವಣಿಯಲ್ಲಿ ಹೇಗೆ ವ್ಯಕ್ತವಾಗಿದೆ ? ತಿಳಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

43. ಸತ್ಯ, ಸದ್ವರ್ತನೆ, ಶಾಂತಿ, ಪ್ರೇಮ, ಅಹಿಂಸೆ ಈ ಐದು ಮೌಲ್ಯಗಳು ಆಚಂದ್ರಾರ್ಕವಾಗಿ ಅನೂಚಾನವಾಗಿ ಮಾನವನ ಮೇಲೆ ಸಮೃದ್ಧ ಪ್ರಭಾವ ಬೀರುತ್ತಾ ಬಂದಿರುವ ಮೌಲ್ಯಗಳಾಗಿರುತ್ತವೆ. ಅವುಗಳನ್ನು ಜಾಗೃತಗೊಳಿಸಿ, ಮನದಟ್ಟು ಮಾಡಿ ಚಾರಿತ್ರ್ಯದಲ್ಲಿ ಆಂತರೀಕರಣಗೊಳಿಸಿ ರೂಢಿಗತ ಮಾಡುವುದು ಅತಿ

Re-uploaded at Learnmate



ಮುಖ್ಯವಾಗಿದೆ. ಸಾಮಾನ್ಯ ಅರ್ಥದಲ್ಲಿ ಸತ್ಯ ಎಂದರೆ ಸುಳ್ಳು ಹೇಳದಿರುವುದು ಎಂಬ ಪರಿಕಲ್ಪನೆ ಬೆಳೆದಿದೆ. ವಾಸ್ತವವಾಗಿ ಸತ್ಯ ಎಂಬ ಪರಿಕಲ್ಪನೆಯು ಅದಕ್ಕಿಂತ ಮಿಗಿಲಾದ ಸ್ಥಾನವನ್ನು ಹೊಂದಿದೆ. ಸತ್ಯ ಎಂದರೆ ಇರುವಿಕೆ. ಸತ್ಯವಿದ್ದಲ್ಲಿ ಶುದ್ಧ ಜ್ಞಾನವಿರುತ್ತದೆ. ಸತ್ಯವಿಲ್ಲದ, ಶುದ್ಧ ಜ್ಞಾನದ ಸಂಭವವೇ ಇಲ್ಲ. ಸತ್ಯ, ಆತ್ಮ, ಮನಸ್ಸು ಮಾತಿನಲ್ಲಿದ್ದಾಗ ಕರ್ಮದಲ್ಲಿ ವರ್ಧಿಸುತ್ತದೆ. ಸತ್ಯದ ಕೃತಿ ರೂಪವೇ ಸದ್ವರ್ತನೆ. ನುಡಿ ಸತ್ಯವಾದರೆ, ನಡೆ ಸದ್ವರ್ತನೆ. ನುಡೆ ನುಡಿ ಒಂದಾದರೆ ಬಾಳು ಹಸನಾಗುತ್ತವೆ. ಸತ್ಯವೇ ಗುರಿ, ಅಹಿಂಸೆಯೇ ಸಾಧನ. ಜೀವನದಲ್ಲಿ ಸತ್ಯಕ್ಕೆ ಅಗ್ರಸ್ಥಾನವಿದೆ. ಜೀವನದಲ್ಲಿ ಸತ್ಯ ಸಾಧನೆಗೆ ಅಹಿಂಸೆಯು ಕಾರ್ಯ ಸಾಧಕವಾಗಿರುತ್ತದೆ.

ಪ್ರತಿಯೋರ್ವ ಮಾನವರಲ್ಲಿ ಮಾನವತೆ ಸಿದ್ಧಿಯ ಮುಕುಟಮಣಿ ನೆಲೆಸುವುದು ಅಹಿಂಸೆ ಮೌಲ್ಯದಿಂದ. ಅಹಿಂಸೆ ಮಾನವರನ್ನು ಆವರಿಸಿದಾಗ ಮಾನವತಾಗುಣ ಸ್ವರೂಪಿಯಾಗುತ್ತಾನೆ. ತನ್ಮೂಲಕ ಆತನಲ್ಲಿ ಸೌಹಾರ್ದಯುತ ಗುಣ ವರ್ಧಿಸುತ್ತದೆ. ತತ್ಫಲವಾಗಿ ಸಾಮರಸ್ಯ ಗುಣವು ಉದ್ದೀಪನಗೊಂಡು ಸರ್ವ ಜೀವ ಜಂತುವನ್ನು ಅರ್ಥ ಮಾಡಿಕೊಳ್ಳುವ ಹಾಗೂ ಪರಸ್ಪರ ಸಹನೆ, ತಾಳ್ಮೆಯಿಂದ ವರ್ತಿಸುವ ಮನೋಭಿಲಾಷೆ ದೃಢವಾಗುತ್ತದೆ. ಜೀವಜಂತುಗಳನ್ನು ಪ್ರೇಮ ವಿಶ್ವಾಸದಿಂದ ನೋಡುವ ಮೂಲಕ ಮೃಗೀಯ ಗುಣ ಅಥವಾ ಪ್ರವೃತ್ತಿ ದೂರವಾಗುತ್ತದೆ. ಅಹಿಂಸಾಚರಣೆಯಿಂದ ಲೌಕಿಕ ಪ್ರಪಂಚದಲ್ಲಿ ಪ್ರೀತಿ ಪ್ರೇಮ ಪಡಿ ಮೂಡುತ್ತವೆ. ಅಲ್ಲದೆ ಉದಾತ್ತ ಗುಣಗಳು, ಮನೋಭಾವಗಳು ರೂಪುಗೊಳ್ಳುತ್ತವೆ. ತನ್ಮೂಲಕ ಭಾವನೆಯಂತೆ ಮಾತು ಸ್ಫುರಿಸುತ್ತದೆ. ಭಾವೋದ್ವೇಗಗಳಿಲ್ಲದ ಸಮಚಿತ್ತವೇ ಶಾಂತಿ. ಚಿತ್ತ ಸಮತೆಯೇ ಮನಃಶ್ಶಾಂತಿಗೆ ಸುಲಭವಾಗುತ್ತದೆ. ಭಾವನಾ ಲೋಕವೇ ಪ್ರೇಮದ ಸೆಲೆ, ನೆಲೆಯಾಗಿದೆ. ಭಾವನಾ ಲೋಕದ ಪರಿಪಕ್ವತೆಯು ಪ್ರೇಮವನ್ನು ನೆಲೆಗೊಳಿಸುತ್ತದೆ. ಪ್ರೇಮ ವಸ್ತು–ವಿಷಯ. ಆಚಾರ–ವಿಚಾರಗಳು, ನಡೆ–ನುಡಿ ಪ್ರಾಣಿ ಪಕ್ಷಿ ಜೀವ ಜಂತುಗಳಲ್ಲಿ ಎಲ್ಲದಕ್ಕೂ ಸಂಬಂಧಿತವಾದದ್ದಾಗಿದೆ.

***ಪ್ರಶ್ನೆಗಳು:***

ಅ) ಅಹಿಂಸೆ ಮಾನವನನ್ನು ಆವರಿಸಿದಾಗ ಆತನಲ್ಲಾಗುವ ಬದಲಾವಣೆಗಳಾವುವು ?

ಬ) ಸತ್ಯದ ಮಹತ್ವವನ್ನು ತಿಳಿಸಿ.

[ Turn over

Re-uploaded at Learnmate



**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

44. ನಿಮ್ಮನ್ನು ಬಳ್ಳಾರಿ ಜಿಲ್ಲೆಯ ಕುರುಗೋಡಿನ ನಿವಾಸಿ 'ಸಾತ್ವಿಕ' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಪ್ರಕರಣಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಂತೆ ಕೋರಿ, 'ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ'ಗಳಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ವಿಜಯನಗರ ಜಿಲ್ಲೆಯ ರಾಜಾಪುರದ ಸರ್ಕಾರಿ ಪ್ರೌಢಶಾಲೆಯ 'ಸಮರ್ಥ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸುತ್ತಿರುವ 'ಶಾಲಾಶತಮಾನೋತ್ಸವ' ಸಮಾರಂಭಕ್ಕೆ ಆಹ್ವಾನಿಸಿ ಕೊಪ್ಪಳದಲ್ಲಿ ವಾಸವಾಗಿರುವ 'ಸುರೇಶ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5**

45. ಭ್ರಷ್ಟಾಚಾರದ ನಿರ್ಮೂಲನೆಯಲ್ಲಿ ಯುವ ಜನತೆಯ ಪಾತ್ರ.

**ಅಥವಾ**

ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಮಹತ್ವ.

Re-uploaded at Learnmate

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -4

## S.S.L.C. MODEL QUESTION PAPER-4 : 2024-25

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**ವಿಷಯ ಸಂಕೇತ : 01-K** | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 100 ] | [ Max. Marks : 100

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

Re-uploaded at Learnmate



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6**

1. ಜ, ಞ, ಣ, ನ, ಮ – ಇವು

   (ಎ) ಅಲ್ಪಪ್ರಾಣಾಕ್ಷರ (ಬಿ) ಅನುನಾಸಿಕ

   (ಸಿ) ಅವರ್ಗೀಯವ್ಯಂಜನ (ಡಿ) ಮಹಾಪ್ರಾಣಾಕ್ಷರ

2. ಸಪ್ತಮೀ ವಿಭಕ್ತಿ ಪ್ರತ್ಯಯವಿದು

   (ಎ) ಅಂ (ಬಿ) ಇಂದಂ

   (ಸಿ) ಅತ್ತಣಿಂ (ಡಿ) ಒಳ್

3. 'ಮಾಡಿಯಾನು' ಎಂಬುದು ಈ ಕ್ರಿಯಾರೂಪವಾಗಿದೆ

   (ಎ) ಸಂಭಾವನಾರ್ಥಕ (ಬಿ) ವಿಧ್ಯರ್ಥಕ

   (ಸಿ) ವಿರುದ್ಧಾರ್ಥಕ (ಡಿ) ನಿಷೇಧಾರ್ಥಕ

4. 'ದ್ರವ್ಯಾರ್ಥಿ' ಪದ ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

   (ಸಿ) ಆದೇಶ ಸಂಧಿ (ಡಿ) ಯಣ್ ಸಂಧಿ

5. ಬಹುವ್ರೀಹಿ ಸಮಾಸಕ್ಕೆ ಸೇರಿದ ಪದ

   (ಎ) ದಿನಪಸುತ (ಬಿ) ಹೊಗೆದೋರು

   (ಸಿ) ಬಿಲ್ಗೊಂಡು (ಡಿ) ರಾಮಲಕ್ಷ್ಮಣರು

6. ಅರಸುಗಳ (ರಾಜರ) ಕುದುರೆಯಿದು. – ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

   (ಎ) ಭಾವಸೂಚಕ ಚಿಹ್ನೆ (ಬಿ) ಉದ್ಧರಣ ಚಿಹ್ನೆ

   (ಸಿ) ಆವರಣ ಚಿಹ್ನೆ (ಡಿ) ಅಲ್ಪವಿರಾಮ ಚಿಹ್ನೆ

Re-uploaded at Learnmate



**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

7. ಶಿಕ್ಷಕ : ಅನ್ವರ್ಥನಾಮ :: ಪರ್ವತ : ......................... .

8. ವೈಶಾಖ : ಬೇಸಗೆ :: ಪಾದುಕಾ : ......................... .

9. ನೆರೆಹೊರೆ : ಜೋಡುನುಡಿ :: ಹೌದುಹೌದು : ......................... .

10. ಚೆನ್ನಾಗಿ : ಸಾಮಾನ್ಯಾರ್ಥಕಾವ್ಯಯ :: ಚಂದ್ರನಂತೆ : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7**

11. ಪ್ರಾಣಿಗಳು ತಮ್ಮ ಮಕ್ಕಳಿಗೆ ಹೇಗೆ ತರಪೇತು ಕೊಡುತ್ತವೆ ?

12. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು ?

13. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು ?

14. ಕಾಶ್ಯಪಿಯ ಸಹೋದರನ ಹೆಸರೇನು ?

15. ಕರ್ಣ–ದುಶ್ಶಾಸನರನ್ನು ಕೊಂದವರು ಯಾರು ?

16. ಹಲಗಲಿ ಲಾವಣಿಗೆ ಯಾವ ಘಟನೆ ಕಾರಣವಾಗಿದೆ ?

17. ಜಗತ್ತು ಯಾರಿಗೆ ಕ್ಷುದ್ರವಾಗಿ ಕಾಣುತ್ತದೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20**

18. ಕನ್ನಡ ಭಾಷೆ ಹದಗೊಂಡದ್ದು ಹೇಗೆ ?

19. ರಾಮನು ಗಿರಿವನವನ್ನು ಪ್ರಾರ್ಥಿಸಿದ ಬಗೆಯನ್ನು ತಿಳಿಸಿ.

20. ಶಬರಿ ರಾಮಲಕ್ಷ್ಮಣರನ್ನು ಹೇಗೆ ಉಪಚರಿಸಿದಳು ?

21. 'ವೆಸ್ಟ್ ಮಿನ್‌ಸ್ಟರ್ ಮಂದಿರದಲ್ಲಿಯ' 'ಸ್ಟೋನ್ ಆಫ್ ಸ್ಕೋನ್' ವಿಶೇಷತೆ ತಿಳಿಸಿ.

22. ಹಕ್ಕಿಯ ಹಾರಾಟವನ್ನು ಕವಿ ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

Re-uploaded at Learnmate



23. ಹಲಗಲಿಗೆ ದಂಡು ಬರಲು ಕಾರಣವೇನು ?

24. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ವಸಂತನ ಆಗಮನದ ಸಂದರ್ಭದಲ್ಲಿ ಇಳೆಯು ಸಂಭ್ರಮಿಸುವ ರೀತಿ ತಿಳಿಸಿ.

25. ಜಲಿಯನ್ ವಾಲಾಬಾಗ್‌ನಲ್ಲಿ ಜನರಲ್ ಡಯರ್ ಗುಂಡಿನ ದಾಳಿ ನಡೆಸಿದ ಸಂದರ್ಭವನ್ನು ವಿವರಿಸಿ.

26. 'ಅನ್ ಟು ದಿಸ್ ಲಾಸ್ಟ್' ಕೃತಿಯಿಂದ ಗಾಂಧೀಜಿಯವರು ಅರ್ಥೈಸಿಕೊಂಡ ಸಿದ್ಧಾಂತಗಳನ್ನು ತಿಳಿಸಿ.

27. ಅರಿಯದವನ ಮತ್ತು ಬಲ್ಲವನ ಸಂಗದ ಪರಿಣಾಮಗಳನ್ನು ತಿಳಿಸಿ.

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$**

28. ಎ.ಎನ್. ಮೂರ್ತಿರಾವ್

29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$**

30. ಅಂಬುಜಾನನೆ ಕೇಳು ತಾಂಡವ

ನೆಂಬ ಮುನಿ ಪಿತೃ ಮಾತೃ ಸೇವಾ

ಲಂಬಕನು ತೊಳಲಿದನು ನಾನಾ ತೀರ್ಥಯಾತ್ರೆಯಲಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : $1 \times 3 = 3$**

31. ಬಲ್ಲವರೊಡನೆ ಸಂಗವ ಮಾಡಿದಡೆ

ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : $1 \times 3 = 3$**

32. ಆಪತ್ತಿಗಾದವನೇ ನೆಂಟ.

**ಅಥವಾ**

ಮನಸ್ಸಿದ್ದರೆ ಮಾರ್ಗ.

Re-uploaded at Learnmate



**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."

34. "ಯಾರದು, ಒಳಗೆ ? ಬಾಗಿಲು ತೆಗೆಯಿರಿ."

35. "ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ."

36. "ರೆಕ್ಕೆಯ ಬೀಸುತ ಚೇತನಗೊಳಿಸಿ."

37. "ಅಹಿತರೊಳ್ ಸಂಧಿಯನೇಂ ಸಮಕೊಳಿಸಲೆಂದು ಬಂದೆನೆ."

38. "ಜಲಕ್ಕನೀಗಳಚೆದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ."

**X. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

39. ಕೊರಳ ಸೆರೆ ಹಿಗ್ಗಿದವು ದೃಗುಜಲ

.....................................................................

.....................................................................

.....................................................................

.....................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**ಅಥವಾ**

ಮಾರಿಗೌತಣವಾಯ್ತು ನಾಳಿನ

.....................................................................

.....................................................................

.....................................................................

.....................................................................

ವೀರರೈವರ ನೋಯಿಸೆನು ರಾಜೀವಸಖನಾಣೆ

Re-uploaded at Learnmate



**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 × 4 = 4**

40. ಸುತ್ತಲು ಕವಿಯುವ ಕತ್ತಲೆಯೊಳಗೆ

ಪ್ರೀತಿಯ ಹಣತೆಯ ಹಚ್ಚೋಣ.

ಬಿರುಗಾಳಿಗೆ ಹೊಯ್ದಾಡುವ ಹಡಗನು

ಎಚ್ಚರದಲಿ ಮುನ್ನಡೆಸೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ್ 'ಮಾದರಿ ಮೈಸೂರು ರಾಜ್ಯ'ದ ನಿರ್ಮಾಣಕ್ಕೆ ಕಂಕಣಬದ್ಧರಾಗಿ ಶ್ರಮಿಸಿದ ಬಗೆಯನ್ನು ವಿವರಿಸಿ.

**ಅಥವಾ**

'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ರೂಪುಗೊಳ್ಳಲು ವಿಶ್ವೇಶ್ವರಯ್ಯನವರ ಕೊಡುಗೆಗಳೇನೆಂಬುದನ್ನು ಬರೆಯಿರಿ.

42. ಲವನ ವೀರತ್ವವು 'ವೀರಲವ' ಪದ್ಯದಲ್ಲಿ ನಿರೂಪಿತವಾದ ಬಗೆಯನ್ನು ವಿವರಿಸಿ.

**ಅಥವಾ**

ಯಜ್ಞಾಶ್ವವನ್ನು ಕಟ್ಟಲು ಲವನು ನೀಡಿದ ಸಮರ್ಥನೆಯನ್ನು ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

43. ಭಾರತದ ಸ್ವಾತಂತ್ರ್ಯ ಹೋರಾಟದ ನಂತರ ಕರ್ನಾಟಕದ ಜನತೆ ಮತ್ತೊಂದು ಹೋರಾಟಕ್ಕೆ ಅಣಿಯಾಗಬೇಕಾಯಿತು. ಅದಾವುದೆಂದರೆ, ಮುಂಬೈ, ಮದ್ರಾಸ್, ಹೈದರಾಬಾದ್ ಪ್ರಾಂತ್ಯಗಳಲ್ಲಿ

Re-uploaded at Learnmate



ಚದುರಿಹೋಗಿದ್ದ ಕನ್ನಡ ಮಾತನಾಡುವ ಜನರನ್ನು ಮತ್ತು ಪ್ರದೇಶವನ್ನು ಒಂದುಗೂಡಿಸಿ ಅಖಂಡ ಕನ್ನಡನಾಡನ್ನು ಕಟ್ಟುವ ಕರ್ನಾಟಕ ಏಕೀಕರಣ ಹೋರಾಟ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕೂಡ ಭಾಷಾವಾರು ಪ್ರಾಂತ್ಯಗಳ ಅವಶ್ಯಕತೆಯನ್ನು ಎತ್ತಿ ಹಿಡಿಯಿತು.

ಕನ್ನಡದ ಸಾಹಿತಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ ಮುಂತಾದ ನಾಡಿನ ಹಲವು ಸಂಘ-ಸಂಸ್ಥೆಗಳು ರಾಜಕೀಯ ಮುಖಂಡರು, ವಿದ್ಯಾರ್ಥಿಗಳು, ಜನಸಾಮಾನ್ಯರು ಏಕೀಕರಣ ಹೋರಾಟದಲ್ಲಿ ಭಾಗವಹಿಸಿದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಹಾಡು ಎಲ್ಲೆಲ್ಲೂ ಜನರನ್ನು ಬಡಿದೆಬ್ಬಿಸಿತು. 1936 ರಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ 6ನೆಯ ಶತಮಾನೋತ್ಸವ ಕರ್ನಾಟಕ ಏಕೀಕರಣಕ್ಕೆ ಜನರನ್ನು ಹುರಿದುಂಬಿಸಿತು. 1927 ರಲ್ಲಿ ನಡೆದ ಮೈಸೂರು ರಾಜರ 'ಬೆಳ್ಳಿಹಬ್ಬ' ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಆಚರಿಸಲ್ಪಟ್ಟಿತು.

ಎಸ್. ನಿಜಲಿಂಗಪ್ಪ, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ಕಡಪ ರಾಘವೇಂದ್ರರಾವ್, ಬಿ.ಎಂ.ಶ್ರೀಕಂಠಯ್ಯ, ಅ.ನ.ಕೃಷ್ಣರಾವ್, ಬಿ. ಶಿವಮೂರ್ತಿ, ರಂಗನಾಥ ದಿವಾಕರ, ಕೋ. ಚೆನ್ನಬಸಪ್ಪ ಮುಂತಾದ ನೂರಾರು ಸಾಹಿತಿಗಳು, ರಾಜಕಾರಣಿಗಳು ಗಣ್ಯರ ಶ್ರಮದ ಫಲವಾಗಿ 1953 ರಲ್ಲಿ ಕರ್ನಾಟಕ ಏಕೀಕರಣವಾಯಿತು.

***ಪ್ರಶ್ನೆಗಳು:***

ಅ) ಕರ್ನಾಟಕ ಏಕೀಕರಣ ಹೋರಾಟವನ್ನು ಜನಮಾನಸಗೊಳಿಸಿದ ದೃಷ್ಟಾಂತಗಳಾವುವು ?

ಬ) ಕರ್ನಾಟಕ ರಾಜ್ಯ ಒಂದುಗೂಡಲು ಹೋರಾಡಿದ ಮಹನೀಯರನ್ನು ಹೆಸರಿಸಿ.

[ Turn over

Re-uploaded at Learnmate



**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

44. ನಿಮ್ಮನ್ನು ಬೆಳಗಾವಿಯ ನಿವಾಸಿ 'ಭೂಮಿಕಾ' ಎಂದು ಭಾವಿಸಿಕೊಂಡು, ಚೆನ್ನಮ್ಮ ಬಡಾವಣೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಿಕೊಡುವಂತೆ ಕೋರಿ, 'ಮಹಾನಗರ ಪಾಲಿಕೆ ಆಯುಕ್ತರಿ'ಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ 'ಭುವನ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ನಡೆದ ಶಾಲಾ ಸಂಸತ್ತಿನ ಚುನಾವಣಾ ಪ್ರಕ್ರಿಯೆಯನ್ನು ವಿವರಿಸಿ, ದಾವಣಗೆರೆಯಲ್ಲಿರುವ ನಿಮ್ಮ ಸಹೋದರ 'ವಿವೇಕ'ನಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5**

45. ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತದ ಸಾಧನೆ.

**ಅಥವಾ**

'ಭಾರತೀಯ ಸಮಾಜವನ್ನು ಕದಡುತ್ತಿರುವ ಮಾರಕಾಂಶಗಳು.'